(ರಾಷ್ಟ್ರಗೀತೆಯೊಂದಿಗೆ ಘನತೆವೆತ್ತ ರಾಜ್ಯಪಾಲರ ಭಾಷಣ ಮುಕ್ತಾಯಗೊಂಡಿತು)

(ಸದನವು ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನ: 1ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ವಂದೇ ಮಾತರಂ ಗೀತೆಯೊಂದಿಗೆ ಸದನವು ಪ್ರಾರಂಭವಾಯಿತು)

ಅಧ್ಯಕ್ಷರು: ಮಾನ್ಯ ಎಲ್ಲಾ ಸದಸ್ಯರುಗಳಿಗೆ ಹೊಸ ವರ್ಷದ ಶುಭಾಷಯಗಳನ್ನು ಕೋರುತ್ತೇನೆ. ಹೊಸ ವರ್ಷ ತಮಗೆಲ್ಲರಿಗೂ ಮತ್ತು ರಾಜ್ಯಕ್ಕೂ ಹರ್ಷವನ್ನು ತರಲಿ ಎಂದು ನಾವು ನೀವೆಲ್ಲರೂ ಸೇರಿ ಇವತ್ತು ಪ್ರಾರ್ಥನೆಯನ್ನು ಮಾಡೋಣ. ಈಗ ಮುಂದಿನ ಕಾರ್ಯಕಲಾಪ. ಈಗ ಕಾರ್ಯದರ್ಶಿಯವರಿಂದ ವರದಿ.

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ: ಸನ್ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಮಾನ್ಯ ರಾಜ್ಯಪಾಲರಿಂದ ಒಪ್ಪಗೆಯನ್ನು ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಅನುಬಂಧ–2)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಒಂದು ಪ್ರಕಟಣೆ ಇದೆ.